ಜೊತೆಗೂಡಿಸಿಕೊಂಡು ಆಸ್ಪತ್ರೆಯ ಮೆಟ್ಟಿಲೇರಿದರು. ಪೂರ್ವಾಪರವನ್ನು ವಿಚಾರಿಸಿದ ವೈದ್ಯರು ನೇರವಾಗಿಯೇ ತಿಳಿಸಿದ್ದರು. ಆದರೂ ಅತ್ತೆಯ ಒತ್ತಾಯಕ್ಕೆ ಮಣಿದು ಪರೀಕ್ಷಿಸಲಾಗಿ ಎಲ್ಲವೂ ಸ್ಪಷ್ಟವಾಗಿತ್ತು. ವೈದ್ಯರ ಹೇಳಿಕೆಯಂತೆ ಸೊಸೆಯಲ್ಲಿ ಯಾವುದೇ ತೊಂದರೆ ಇಲ್ಲ ಎಂದು ತಿಳಿದ ಅತ್ತೆಗೆ ಮಗನಲ್ಲಿಯ ದೋಷ ಕಂಡೂ ಕಾಣದಾಗಿತ್ತು. ಇಪ್ಪತ್ತು ವರ್ಷಕ್ಕೂ ಮೇಲ್ಪಟ್ಟ ವಯಸ್ಸಿನ ಅಂತರ ಈಗ ದೊಡ್ಡದಾಗಿ ಗೋಚರಿಸಿತು. ಆದರೂ ಬಲವಂತ ಮಾಡಿ ಮಗನನ್ನು ವೈದ್ಯರ ಬಳಿ ಕಳುಹಿಸುವಾಗ ಮುಂದಿನ ತೊಂದರೆಯ ಯೋಚನೆ ತಿಳಿದಿರಲಿಲ್ಲ.

ಆಸ್ಪತ್ರೆಯಿಂದ ಮರಳಿದ ಗಂಡ, ಗಂಡನಾಗಿರಲಿಲ್ಲ. ಸ್ವತಃ ತನ್ನ ಮೇಲಿನ ಸಿಟ್ಟೋ, ಅವಮಾನವೋ, ವಯೋಸಹಜ ಹತಾಶೆಯೋ ಯಾವುದೂ ತಿಳಿಯದೆ ವಿಚಿತ್ರವಾಗಿ ಆಡಲು ಶುರು ಮಾಡಿದ್ದ. ಕೊನೆಯ ಪಕ್ಷ ರಾತ್ರಿಗಾದರೂ ಮನೆಗೆ ಬರುತ್ತಿದ್ದ ಮಗ, ಬರಬರುತ್ತಾ ಹಗಲು ರಾತ್ರಿ ಎನ್ನದೆ ಮನೆಯಿಂದ ಹೊರಗುಳಿಯುತ್ತಿದ್ದುದು ಮೃದು ಸ್ವಭಾವದ ಅತ್ತೆಗೆ ಸಹಿಸಲಾಗಲಿಲ್ಲ. ಯಾವುದಕ್ಕೂ ಪ್ರತಿಕ್ರಿಯಿಸದ ಮಾವನ ಬೇಜವಾಬ್ದಾರಿತನವೂ ಅತ್ತೆಯನ್ನು ಕುಬ್ಜಳನ್ನಾಗಿಸಿತ್ತು.

ಈ ನಡುವೆಯೇ ಅತ್ತೆ ಭಯಂಕರ ನಿರ್ಧಾರವೊಂದನ್ನು ಮನಸ್ಸಿನಲ್ಲಿ ಗಟ್ಟಿ ಮಾಡಿಕೊಂಡಿದ್ದಳು. ಮುಂದಿನ ಕಷ್ಟಕರ ನಾಲ್ಕು ವರ್ಷದಲ್ಲಿ ನಾನು ಅತ್ತೆಗೆ ಮಗಳಾಗಿದ್ದೆ. ಮಗಳ ಮುಂದಿನ ಜೀವನವನ್ನು ಸರಿಪಡಿಸಿಯೇ ತೀರಬೇಕೆಂಬ ಗಟ್ಟಿ ನಿರ್ಧಾರವನ್ನು ಆಕೆ ಮಾಡಿದ್ದಳು. ಸಂಬಂಧಿಕರಲ್ಲಿ ಯಾರ್‍ಯಾರನ್ನೋ ಹಿಡಿದು, ವಕೀಲರನ್ನು ಸಂಪರ್ಕಿಸಿ ಮಗನಿಗೂ ನನಗೂ ವಿಚ್ಛೇದನ ಕೊಡಿಸಿದಳು. ನನ್ನ ಹೆಸರಿನಲ್ಲಿ ಒಂದಿಷ್ಟು ಹಣ ಠೇವಣಿ ಇರಿಸಿದಳು. ಸಂಬಂಧಿಕರ, ಅಕ್ಕಪಕ್ಕದವರ ಯಾವ ಮಾತಿಗೂ ತಲೆಕೆಡಿಸಿಕೊಳ್ಳದೆ ಇಟ್ಟ ಹೆಜ್ಜೆಯನ್ನು ದೃಢವಾಗಿ ಊರಿದ್ದಳು. ದೂರದ ಮಂಗಳೂರಿನಲ್ಲಿದ್ದ ವೃದ್ಧಾಶ್ರಮಕ್ಕೆ ಆಯಾ ಕೆಲಸಕ್ಕೆಂದು ಸ್ವತಃ ತಾನೇ ತಂದು ಬಿಟ್ಟು ಹೋಗಿದ್ದಳು. ಯಾವುದೇ ಕಾರಣಕ್ಕೂ ತಿರುಗಿ ಬರಬಾರದೆಂದು ಕೈಯನ್ನು ಅದುಮಿ, ಕಣ್ಣಲ್ಲಿ ಕಣ್ಣಿಟ್ಟು ವಿದಾಯ ಹೇಳಿದ್ದಳು. ನೀರುತುಂಬಿದ ಕಣ್ಣನಲ್ಲಿ ಹಿಂತಿರುಗಿ ನೋಡುತ್ತಾ, ಭಾರವಾದ ಹೆಜ್ಜೆ ಇಡುತ್ತಾ ಸಾಗುತ್ತಿದ್ದ ಅತ್ತೆಯಲ್ಲಿ ಅಪ್ಪಿತಪ್ಪಿಯೂ ಅವ್ವ ಸುಳಿಯಲಿಲ್ಲ. ಕೊಟ್ಟ ಮನೆಯೊಂದಿಗೆ ಬಿಟ್ಟ ಮನೆಯೂ ದೂರವಾಗಿ, ಸಂಬಂಧವಿಲ್ಲದ ಅನಾಥ ವೃದ್ಧರು ಸಂಬಂಧಿಕರಾಗಿ ಜೀವನ ಸಾಗಲಾರಂಭಿಸಿತು. ಅತ್ತೆಯ ಸ್ಥಿತಿ, ಅಲ್ಲಿಯ ಪರಿಸ್ಥಿತಿ ಯಾವುದೂ ತಿಳಿಯದೆ ಎರಡು ವಸಂತಗಳು ಕಳೆದವು. ಅತ್ತೆ ದೈವಾಧೀನರಾಗಿ ನಾಲ್ಕು ದಿನದ ಮೇಲೆ ವಿಷಯ ತಿಳಿದಿತ್ತು. ಅನಾಥರ ಜೊತೆ ನಾನೂ ಅನಾಥಳಾದ ಭಾವ.

ವೃದ್ಧಾಶ್ರಮದಲ್ಲಿದ್ದ ಪ್ರತಿಯೊಬ್ಬರಲ್ಲೂ ಅತ್ತೆಯನ್ನೇ ಕಲ್ಪಿಸಿಕೊಳ್ಳುತ್ತಿದ್ದ ನನಗೆ, ಅತ್ತೆ ಇವರಲ್ಲೇ ಲೀನಳಾದಳೆಂಬ ಭಾವ ದೃಢವಾಗಿ ಆವರಿಸಿತು. ಒಳಗಿನಿಂದ ಯಾರೋ, "ಶಾರದೆ... ಶಾರದೆ..." ಎಂದು ಕೂಗಿದ್ದು ಕೇಳಿ, "ಬಂದೆ ಅತ್ತೆ" ಎಂದು ಹೇಳುತ್ತಲೇ ಒಳಗೆ ಧಾವಿಸಿದೆ.


**ಶ್ವೇತಾ ಆಡುಕಳ**

ಹೊನ್ನಾವರದ ಮಂಕಿ ಬಳಿಯ ಆಡುಕಳ ಸ್ವಂತ ಊರು. ಮೈಸೂರಿನ ಕಾವಾದಲ್ಲಿ ಬಿ.ಎಫ್.ಎ., ಬೆಂಗಳೂರಿನ ಚಿತ್ರಕಲಾ ಪರಿಷತ್‌ನ ಎಂ.ವಿ.ಎ ಪದವೀಧರೆ. ವಿದ್ಯಾಭ್ಯಾಸದ ಬಳಿಕ ಕಾರ್ಪೊರೇಟ್ ಜಗತ್ತಿನಲ್ಲಿ ಕೆಲಕಾಲ ವೃತ್ತಿ. ಕಾರ್ಪೊರೇಟ್ ಜಗತ್ತಿನ ವೃತ್ತಿಗೆ ವಿದಾಯ ಹೇಳಿ ಫ್ರೀಲಾನ್ಸ್ ಕಲಾವಿದೆಯಾಗಿ, ವಿನ್ಯಾಸಕಿಯಾಗಿ ಕೆಲಸ ಮುಂದುವರಿಸಿದ್ದಾರೆ. ಪುಸ್ತಕಗಳ ಮುಖಪುಟ ವಿನ್ಯಾಸ ನೆಚ್ಚಿನ ಹವ್ಯಾಸ. ಕನ್ನಡದ ಹಲವು ಪುಸ್ತಕಗಳಿಗೆ ಮುಖಪುಟ ರಚಿಸಿದ್ದಾರೆ.